ನಿಮಿಷಗಳ ತರುವಾಯ ಸೊಪ್ಪಿನ ಪೇಟೆಯಲ್ಲಿ ಚಳಿಯಲ್ಲಿ ನಡುಗುತ್ತಾ ಸೊಪ್ಪು ಮಾರುತ್ತಿದ್ದ ಅಜ್ಜಿಯ ಧ್ವನಿಯೊಂದು ಕೇಳಿ ಬಂತು. 'ತಮ್ಮ ಆ ಐದು ನೂರು ರೂಪಾಯಿ ನಂದಪ್ಪ. ನಸುಕಿನ ಜಾವದಾಗ ರೈತರಿಂದ ಸೊಪ್ಪು ಖರೀದಿ ಮಾಡುವಾಗ ಕಳಕೊಂಡಿದ್ದೆ. ಇವತ್ತು ಬಂದ ರೊಕ್ಕವನ್ನೆಲ್ಲ ಕೂಡಿಟ್ಟು ಮೊಮ್ಮಗನ ಶಾಲೆ ಫೀಸ್ ಕಟ್ಟೋದಿತ್ತು. ಯಾರೋ ಪುಣ್ಯಾತ್ಮರಿಗೆ ಸಿಕ್ಕಿದೆ. ದೇವರಾಣೆಗೂ ಅದು ನಂದೇ ರೊಕ್ಕ' ಅಂದಳು. ಅಜ್ಜಿಯ ಮುಗ್ಧ ಮಾತುಗಳನ್ನು ಕೇಳಿಸಿಕೊಂಡ ಪೊಲೀಸ್ ಸಾಹೇಬ್ರು, ಸುಹಾಸ ಮತ್ತು ಆತನ ತಂದೆ ಅಜ್ಜಿಯ ಬಳಿಗೆ ತೆರಳಿ, ಅಜ್ಜಿಗೆ ಆ ಹಣವನ್ನು ಹಿಂದಿರುಗಿಸಿದರು. 'ಅಪ್ಪ ತಂದೆ ಈ ಹಣ ಇಲ್ದೆ ಇದ್ರೆ ನಾಳೆ ಮೊಮ್ಮಗನನ್ನು ಶಾಲೆಗೆ ಸೇರಿಸುವುದು ಹೇಗಪ್ಪ ಅಂತ ಬೆಳಿಗ್ಗೆಯಿಂದ ಒಂದೇ ಸಮನೆ ಅಳುತ್ತಾ ಕುಂತಿದ್ದೆ. ನಾನು ಕಷ್ಟಪಟ್ಟು ದುಡಿದಿದ್ದ ಹಣವನ್ನು ನನಗೆ ವಾಪಸ್ ನೀಡಿದ್ದಕ್ಕೆ ತಮಗೆ ದೇವರು ಒಳ್ಳೆಯದು ಮಾಡಲಿ' ಅಂತ ಮನದುಂಬಿ ಹರಸಿದಳು. ನೆರೆದಿದ್ದವರೆಲ್ಲ ಅಪ್ಪ–ಮಗನ ಒಳ್ಳೆಯ ಗುಣವನ್ನು ಮೆಚ್ಚಿದರು.

ಸಾರ್ಥಕ ಭಾವದಿಂದ ಸಂತೆಯಿಂದ ಮನೆಗೆ ವಾಪಸ್ ಬರುವಾಗ ಸುಹಾಸ 'ಅಪ್ಪಾಜಿ ಆ ಹಣವನ್ನು ನಾವೇ ಇಟ್ಟುಕೊಳ್ಳಬಹುದಿತ್ತಲ್ವಾ. ನಮಗೂ ಬಡತನ ಇದೆ. ಅಷ್ಟಕ್ಕೂ ನಾನು ತೆಗೆದುಕೊಂಡಿದ್ದನ್ನು ಯಾರು ನೋಡಿರಲಿಲ್ಲ' ಅಂದ. 'ಮಗ ನಮ್ಮದಲ್ಲದ್ದು ನಮ್ಮದಲ್ಲ. ಯಾರೋ ಕಷ್ಟಪಟ್ಟು ಬೆವರು ಸುರಿಸಿ ದುಡಿದದ್ದನ್ನು ಅನುಭವಿಸುವ ಹಕ್ಕು ನಮಗಿಲ್ಲ. ನಿಯತ್ತಿನಿಂದ ಗಂಜಿ ಕುಡಿದರೂ ಅದು ಅಮೃತವೇ ಆಗುತ್ತದೆ' ಎಂದು ಮಗನಿಗೆ ಹೇಳಿದರು. ಅಪ್ಪನ ಮಾತುಗಳನ್ನು ಅರ್ಥ ಮಾಡಿಕೊಂಡ ಸುಹಾಸ. 'ಅಪ್ಪಾಜಿ ನನಗೆ ಗೊತ್ತಿಲ್ಲದೆ ನಾ ಹಾಗೆ ಹೇಳಿದೆ. ಆದರೆ ಪಾಪ ಅಜ್ಜಿ. ಚಳಿ, ಮಳೆ, ಗಾಳಿ ಎನ್ನದೆ ಕಷ್ಟಪಟ್ಟು ಬೆಳಗಿನ ಜಾವವೇ ಬಂದು ಸೊಪ್ಪು ಮಾರಿ ದುಡಿದಿದ್ದ ಹಣವನ್ನು ಬಳಸುವ ಹಕ್ಕು ನಮಗಿಲ್ಲ ಎಂಬುದು ನಿಮ್ಮ ಮಾತಿನಿಂದ ಅರ್ಥವಾಯಿತು. ಅಜ್ಜಿಗೆ ಕಳೆದುಕೊಂಡ ಹಣ ಸಿಕ್ಕಾಗ ಅವಳ ಮುಖದಲ್ಲಿ ಕಂಡ ಆ ಸಮಾಧಾನ ಮತ್ತು ಸಂತೋಷ ನನ್ನ ಕಣ್ಣು ತೆರೆಸಿತು. ಹಾಗೆಯೇ ನೀವು ಹೇಳಿದ ಪಾಠವನ್ನು ಖಂಡಿತ ಜೀವನದಲ್ಲಿ ಅಳವಡಿಸಿಕೊಳ್ಳುತ್ತೇನೆ' ಎಂದ. 'ಹೌದು ಮಗ ಇಂದು ಹಲವರು ದುಡಿಯದೇ, ಬೇರೆಯವರು ದುಡಿದ ಹಣದಲ್ಲಿ ಸುಖವಾಗಿರಬೇಕು ಅಂತ ಬಯಸುತ್ತಾರೆ. ಆದರೆ ಇದು ಮಾನವರು ಮಾನವರಿಗೆ ಮಾಡುವ ದೊಡ್ಡ ದ್ರೋಹ' ಅಂತ ಹೇಳಿದರು.

ಮನೆಗೆ ಬರುತ್ತಿದ್ದ ವಾರಪತ್ರಿಕೆ ಒಂದರಲ್ಲಿ ಚಿತ್ರಗಳಿಗೆ ಬಣ್ಣ ತುಂಬಿ, ನಮಗೆ ಮೇಲ್ ಮಾಡಿ. ವಯಸ್ಸಿನ ಮಿತಿ ಹತ್ತು ವರ್ಷ ಅಂತ ಇದ್ದ ಚಿತ್ರವೊಂದು ಸುಹಾಸನ ಅಕ್ಕಳ ಕಣ್ಣಿಗೆ ಬಿತ್ತು. ತಕ್ಷಣವೇ ಕಲರ್ ಪೆನ್ಸಿಲ್‌ಗಳನ್ನು ಕೈಗೆತ್ತಿಕೊಂಡ ಸೌಮ್ಯ 'ಅಪ್ಪಾಜಿ, ನಾನು ಚೆನ್ನಾಗಿ ಬಣ್ಣ ತುಂಬಿ ಕೊಡುತ್ತೇನೆ. ಆದರೆ ನನಗೆ ಈಗ ಹನ್ನೆರಡು ವರ್ಷವಿರುವುದರಿಂದ,ತಮ್ಮ ಸುಹಾಸನ ಹೆಸರನ್ನು ಪತ್ರಿಕೆಗೆ ಕಳಿಸಿ. ಅವನ ಹೆಸರು ಪತ್ರಿಕೆಯಲ್ಲಿ ಬರುತ್ತದೆ' ಎಂದಳು. ಈ ಮಾತನ್ನು ಕೇಳಿಸಿಕೊಂಡ ಸುಹಾಸ, 'ಅಕ್ಕ ನಮ್ಮದಲ್ಲದ್ದು ನಮ್ಮದಲ್ಲ. ನೀನು ನನಗೆ ಮಾರ್ಗದರ್ಶನ ಮಾತ್ರ ಮಾಡು. ನಾನೇ ಬಣ್ಣ ತುಂಬುತ್ತೇನೆ. ಅದು ಹೇಗಾದರೂ ಬರಲಿ ಅದು ನಾನೇ ತುಂಬಿದ್ದು ಎಂಬ ಹೆಮ್ಮೆ ಮತ್ತು ಖುಷಿ ನನಗೆ ಇರುತ್ತದೆ. ಪತ್ರಿಕೆಯಲ್ಲಿ ಬಂದಾಗಲೂ ನನಗೆ ನಾನೇ ಬಿಡಿಸಿದ್ದು ಹಾಗಾಗಿ ನನ್ನ ಹೆಸರು ಬಂದಿದೆ ಎಂಬ ಸಮಾಧಾನವು ನನಗಿರುತ್ತದೆ' ಎಂದನು. ಈ ಮಾತನ್ನು ಕೇಳಿಸಿಕೊಂಡ ಅಕ್ಕನಿಗೆ ಸುಹಾಸನ ಬಗ್ಗೆ ಹೆಮ್ಮೆ ಎನಿಸಿತು. ■



# ಕಿರಿಯರ ಕೋರಿಕೆ

■ **ವೀರೇಶ ಬ. ಕುರಿ ಸೋಂಪೂರ**

ಕಲೆ: ಸಂತೋಷ್ ಸಸಿಹಿತ್ಲು

ನಮ್ಮ ಊರ ಸುತ್ತ–ಮುತ್ತ
ಹತ್ತಾರು ಕಾರ್ಖಾನೆ
ನಿತ್ಯ ಹೊಗೆಯ ಉಗುಳುತ
ಸೃಷ್ಟಿಸಿವೆ ನರಕವನು!

ಅಮ್ಮನಿಗೂ, ತಮ್ಮನಿಗೂ
ನಿಲ್ಲುತ್ತಲೇ ಇಲ್ಲ ಕೆಮ್ಮು
ಮನೆ ಮಂದಿಯೆಲ್ಲರಿಗೂ
ಸೇರಿಕೊಳ್ಳುತ್ತಿದೆ ದಮ್ಮು

ಮನೆ–ಮಠ, ಶಾಲೆ, ಹೊಲ
ಎಲ್ಲೆಡೆಯೂ ಕಪ್ಪು ದೂಳು
ಕುಡಿವ ನೀರು, ಉಣುವ ಅನ್ನ
ವಿಷವಾಯ್ತು ಎಂತಾ ಗೋಳು

ಹಸಿರು ಗಿಡ–ಮರದ ಮೇಲೆ
ವಿಷಾನಿಲದ ಲೀಲೆ!
ಕರಿ ಬೂದಿಯ ಕಾರ್ಮೋಡ
ಹಬ್ಬಿಸಿದೆ ವ್ಯಾಧಿ ಜ್ವಾಲೆ

ಬಾಳಿ ಬದುಕಬೇಕು ನಾವು
ಈ ಮಣ್ಣಲಿ ನೂರು ಕಾಲ
ನೋಡಿರೊಮ್ಮೆ ನಮ್ಮ ಮುಖ
ಕರುಣೆದೋರಿ ತಪ್ಪಿಸಿ ಶೂಲ

ಕೈಯ ಮುಗಿದು ಕೇಳುವೆವು
ಕರುನಾಡಿನ ಹಿರಿಯರಿಗೆ
ಪರಿಸರ ವಿನಾಶಕೆ ಅಂತ್ಯ ಹಾಡಿ
ನಲಿವು ನೀಡಿ ಕಿರಿಯರಿಗೆ ■